ಕಾವ್ಯ ಮತ್ತು ರಂಗಭೂಮಿಯನ್ನು ಅಭಿವ್ಯಕ್ತಿಯ ಮಾಧ್ಯಮವನ್ನಾಗಿಯೂ ಚಳವಳಿಯ ರೂಪದಲ್ಲಿಯೂ ಆತುಕೊಂಡಿರುವ ಶಿಲೋಕ್ ಮುಕ್ಕಾಟಿ ಕ್ವೀರ್ ಸಮುದಾಯಕ್ಕೆ ಸೇರಿದವರು. ದೇಹ ಮತ್ತು ದೇಹದಿಂದಾಚೆಗೆ ಹಾಗೂ ಅಧ್ಯಾತ್ಮದ ಸಂಗತಿಗಳಲ್ಲಿ ತಮ್ಮ ಛಾಪು ಮೂಡಿಸುವ ಹಂಬಲದ ಶಿಲೋಕ್, ತಮ್ಮನ್ನು ತಾವು 'ಸ್ಥಿತಿಕಾರಕ ದೇವತೆ' ಎಂದು ಕರೆದುಕೊಳ್ಳುತ್ತಾರೆ. ಕಥೆಗಾರ **ದಾದಾಪೀರ್ ಜೈಮನ್** 'ಮಯೂರ'ಕ್ಕಾಗಿ ಶಿಲೋಕ್ ಅವರೊಂದಿಗೆ ನಡೆಸಿರುವ ಸಂದರ್ಶನ ಕ್ವೀರ್ ಸಮುದಾಯದ ಪ್ರತಿನಿಧಿಯೊಬ್ಬರು ಹೋರಾಟದ ಹಾದಿಯನ್ನೂ, ಆ ಹಾದಿಗೆ ಕಲೆ ಮತ್ತು ಕಾವ್ಯ ಪರಿಕರಗಳಾಗಿ ಒದಗಿಬಂದ ಬಗೆಯನ್ನೂ ಕಾಣಿಸುತ್ತದೆ.

# ಶಿಲೋಕ್ ಹೆಸರಿಗೆ ಶಕ್ತಿ ತುಂಬಿದವಳು ನಾನು

## ಕವಯಿತ್ರಿ-ಕಲಾವಿದೆ ಶಿಲೋಕ್ ಮುಕ್ಕಾಟಿ ಸಂದರ್ಶನ

◆ **ಎಲ್ಲರ ಬಾಲ್ಯವೂ ಅದರದೇ ಆದ ರೀತಿಯಲ್ಲಿ ಅಮೂಲ್ಯವೂ ಹಾಗೂ ವಿಶಿಷ್ಟವೇ ಆದರೂ ಸಾಮಾನ್ಯವಾಗಿ ಕ್ವೀರ್ ಸಮುದಾಯದ ಜನರ ಬಾಲ್ಯ ವಿಭಿನ್ನವೂ ಯಾರೊಡನೆಯೂ ಹೇಳಿಕೊಳ್ಳಲಾಗದ ತುಮುಲಗಳನ್ನು ಅನುಭವಿಸುವ ಕಾಲವೂ ಆಗಿರುತ್ತೆ. ನಿಮ್ಮ ಬಾಲ್ಯದ ಬಗ್ಗೆ ಹೇಳಿ?**

ನಾನು ಹುಟ್ಟಿದ್ದು ಚಿಕ್ಕಮಗಳೂರಿನಲ್ಲಿ. ಬೆಳೆದಿದ್ದು ಕೊಡಗು. ನೀವು ಹೇಳಿದ್ದು ನಿಜ. ನಾನು ಚಿಕ್ಕವಳಿದ್ದಾಗ ನನ್ನಲ್ಲೇನೋ ಸಮಸ್ಯೆ ಇದೆ; ನನ್ನಲ್ಲೇನೋ ತೊಂದರೆ ಇದೆ ಅನ್ನಿಸ್ತಾ ಇತ್ತು. ಏನಾದ್ರೂ ಸಮಸ್ಯೆ ಇದ್ರೆ ಅದನ್ನ ಶಾಲೇಲೆ ಮುಗಿಸಿಕೊಂಡು ಬರಬೇಕು, ಮತ್ತದನ್ನ ಮನೆಗೆ ತಗೊಂಡುಬರಬಾರ್ದು ಅಂತ ಪೇರೆಂಟ್ಸ್ ಹೇಳೋರು. ನಾನು ಒಬ್ಬಳೇ ಇರ್ತಾ ಇದ್ದೆ. ಒಂಟಿ ಅನಿಸ್ತಾ ಇತ್ತು. ಆಗಲೇ ನಾನು ಬರೆಯೋಕೆ ಶುರು ಮಾಡ್ದೆ. ಆದಷ್ಟು ನನ್ನ ಕಸಿನ್ಸ್ ಇದ್ದದ್ದು ಹುಡುಗೀರೆ. ಮೊದಲೆಲ್ಲ ಚೆನ್ನಾಗೇ ಆಟ ಆಡ್ತಾ ಇದ್ವಿ. ಆದ್ರೆ ಒಂದು ವಯಸ್ಸಿಗೆ ಬಂದ ಮೇಲೆ 'ಓಹ್, ನೀನು ನಮ್ಮ ಜೊತೆ ಆಟ ಆಡಬಾರದು' ಹಂಗೆ ಹಿಂಗೆ ಅನ್ನೋಕೆ ಶುರು ಮಾಡಿದ್ರು. ನನಗಾಗ ಏನಪ್ಪಾ ಇದು ದಿಢೀರ್ ಬದಲಾವಣೆ ಅಂತ ಅನಿಸಿತ್ತು. ನನಗಿನ್ನೂ ಚೆನ್ನಾಗಿ ನೆನಪಿದೆ. ಅಜ್ಜಿ ಮನೇಲಿದ್ದಾಗ ನಾನು ಅಟ್ಟದ ಮೇಲೆ ಕೂತ್ಕೊಂಡು ಮಕ್ಕಳೆಲ್ಲ ಆಟ ಆಡೋದನ್ನ ನೋಡ್ತಾ ಇದ್ದೆ. ಒಂದು ಕಡೆ ಹುಡುಗೀರು ಆಟ ಆಡೋದಕ್ಕೆ